**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸೊರಬ .**

**ದಿನಾಂಕ 08 ನೇ ಏಪ್ರೀಲ್ - 2021**

**- ಉಪಸ್ಥಿತರು -**

**ಶ್ರೀ. ಬಿ. ಕೇಶವಮೂರ್ತಿ**, ಬಿ.ಎ., ಎಲ್.ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಸೊರಬ.

**ಅಸಲು ದಾವೆ ಸಂಖ್ಯೆ: 143/2019**

**ವಾದಿ** : ಲಕ್ಷ್ಮಣಪ್ಪ ತಂದೆ ಈರಪ್ಪ
ಸುಮಾರು 66 ವರ್ಷ,
ವಾಸಃ ನೇರಲಗಿ ಗ್ರಾಮ,
ಆನವಟ್ಟಿ ಹೋಬಳಿ, ಸೊರಬ ತಾಲ್ಲೂಕು.

(ವಾದಿಯ ಪರವಾಗಿ ಶ್ರೀ. ಹೆಚ್.ಬಿ.ಐ., ವಕೀಲರು)

**- ವಿರುದ್ಧ -**

**ಪ್ರತಿವಾದಿ** : ಪಕ್ಕೀರಪ್ಪ ಬಿನ್ ಈರಪ್ಪ
ಸುಮಾರು 73 ವರ್ಷ,
ವಾಸಃ ನೇರಲಗಿ ಗ್ರಾಮ,
ಆನವಟ್ಟಿ ಹೋಬಳಿ, ಸೊರಬ ತಾಲ್ಲೂಕು.

(ಪ್ರತಿವಾದಿ ಪರವಾಗಿ ಶ್ರೀ ಜಿ.ಎಸ್., ವಕೀಲರು)

| | | |
|---|---|---|
| ದಾವೆಯನ್ನು ಹೂಡಿದ ದಿನಾಂಕ | : | 03.08.2019 |
| ದಾವೆಯ ಸ್ವರೂಪ | : | ಪಾಲುವಾಟ್ನಿ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ. |
| ಸಾಕ್ಷಿಗಳನ್ನು ವಿಚಾರಣೆ ಮಾಡಲು ಪ್ರಾರಂಭಿಸಿದ ದಿನಾಂಕ | : | 23.03.2021 |
| ತೀರ್ಪನ್ನು ಉಚ್ಛರಿಸಿದ ದಿನಾಂಕ | : | 08.04.2021 |

ವರ್ಷ/ಗಳು ತಿಂಗಳು/ಗಳು ದಿನ/ಗಳು

ಒಟ್ಟು ಅವಧಿ : 01 08 05

ಸಹಿ/-
**(ಬಿ.ಕೇಶವಮೂರ್ತಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
**ಸೊರಬ.**

**- ತೀರ್ಪು -**

ವಾದಿಗೆ ಅವರ ಸಹೋದರಿ ಬರೆದುಕೊಟ್ಟಿರುವ ಹಕ್ಕು ಖುಲಾಸೆ ಪತ್ರದ ಆಧಾರದ ಮೇಲೆ **1/3** ಭಾಗದ ಹಿಸ್ಸೆ ಹಕ್ಕು ಮತ್ತು ತನಗಿರುವ **1/3** ನೇ ಭಾಗದ ಹಿಸ್ಸೆ ಹಕ್ಕು ಸೇರಿಸಿ ಒಟ್ಟು **2/3** ಭಾಗದ ಹಿಸ್ಸೆ ಹಕ್ಕಿಗೆ ವಾದಿ ಹಕ್ಕುದಾರ ಎಂದು ನಿರ್ಧರಿಸಿ ಅದರಂತೆ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನವನ್ನು ಮಾಡಿಕೊಡುವಂತೆ ಪರಿಹಾರ ಕೇಳಿರುತ್ತಾರೆ.

**2)** ವಾದಿಯ ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ

ವಾದಿಯ ವಾದ ಪತ್ರದಂತೆ, ವಾದಿಯ ತಂದೆ ಈರಪ್ಪನಿಗೆ ವಂಶವೃಕ್ಷದಲ್ಲಿ ಹೇಳಿದಂತೆ ವಾದಿ, ಪ್ರತಿವಾದಿ ಗಂಡು ಮಕ್ಕಳಾಗಿದ್ದು, ರುದ್ರವ್ವ ಎಂಬುವರು ಹೆಣ್ಣು ಮಗಳಾಗಿರುತ್ತಾರೆ. ಜನಿಸಿರುವುದಾಗಿ, ವಾದಿಯ ತಂದೆ ಈರಪ್ಪ, ರುದ್ರವ್ವಳನ್ನು ಮದುವೆ ಮಾಡಿಕೊಟ್ಟಿದ್ದು, ಆಕೆ ತನ್ನ ಗಂಡನ ಮನೆಯಲ್ಲಿ ವಾಸವಾಗಿರುವುದಾಗಿ ತಿಳಿಸುತ್ತಾರೆ. ಸೊರಬ ತಾಲ್ಲೂಕು, ಆನವಟ್ಟಿ ಹೋಬಳಿ, ಅಗಸನಹಳ್ಳಿ ಗ್ರಾಮದ ಸರ್ವೆ ನಂಃ **91/1** ರ ಹಾಲಿ ಸ.ನಂಃ **91/6** ರ **03-00** ಎಕರೆ ಅಂದರೆ ಶೆಡ್ಯೂಲ್ ನಲ್ಲಿ ವಿವರಿಸಿದ ಸ್ವತ್ತು ವಾದಿ ಪ್ರತಿವಾದಿಯರ ತಂದೆ ಈರಪ್ಪನು ಸ್ವತಂತ್ರವಾಗಿ ಮತ್ತು ಸ್ವಯಾರ್ಜಿತವಾಗಿ ಗಳಿಸಿದ ಸ್ವತ್ತಾಗಿದ್ದು, ವಾದಿಯ ತಂದೆ ಈರಪ್ಪ ಮರಣ ಹೊಂದಿದ ನಂತರ ದಾವಾ ಶೆಡ್ಯೂಲ್ ಸ್ವತ್ತಿಗೆ ವಾದಿ, ಪ್ರತಿವಾದಿ ಮತ್ತು ವಾದಿ-ಪ್ರತಿವಾದಿಯರ ಸಹೋದರಿ ರುದ್ರವ್ವ ಕೋಂ ಮಾಸ್ತಪ್ಪ ಆದ ಇವರು ಸರಳ ವಾರಸುದಾರರಾಗಿದ್ದು, ಅಲ್ಲದೇ ದಾವಾ ಶೆಡ್ಯೂಲ್ ಸ್ವತ್ತಿಗೆ ವಾರಸಾ ಪ್ರಕಾರ ಸದರಿಯವರು ಜಂಟಿ ಹಕ್ಕುದಾರರಾಗಿ, ಸ್ವಾಧೀನದಾರರಾಗಿ ಮುಂದುವರೆದು ಬಂದಿದ್ದರು ಎಂದು, ವಾದಿಯ ಸಹೋದರಿ ರುದ್ರವ್ವ

ರವರು ದಾವಾ ಸ್ವತ್ತಿನಲ್ಲಿ ತನಗಿರುವ **1/3** ನೇ ಭಾಗದ ಹಿಸ್ಸೆ ಸ್ವತ್ತನ್ನು ದಿನಾಂಕಃ **21-03-2017** ರಂದು ನೊಂದಾಯಿತ ಹಕ್ಕು ಖುಲಾಸೆ ಪತ್ರದ ಮುಖಾಂತರ ವಾದಿಗೆ ಬಿಟ್ಟುಕೊಟ್ಟಿರುವುದಾಗಿ, ಸದರಿ ಹಕ್ಕು ಖುಲಾಸೆ ಪತ್ರದ ಪರಕಾರ ರುದ್ರವ್ವ ಕೋಂ ಮಾಸ್ತೆಪ್ಪ ರವರಿಗೆ ದಾವಾ ಶೆಡ್ಯೂಲ್ ನಲ್ಲಿರುವ **1/3** ನೇ ಭಾಗದ ಹಿಸ್ಸೆ ಹಕ್ಕು ಮತ್ತು ಸ್ವಾಧೀನಾನುಭವ ವಾದಿಗೆ ಪ್ರಾಪ್ತವಾಗಿರುವುದರಿಂದ ವಾದಿ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ **2/3** ನೇ ಭಾಗದ ಹಿಸ್ಸೆ ಹಕ್ಕಿಗೆ ಹಕ್ಕುದಾರರು ಎಂದು, ಅದೇ ರೀತಿ ಪ್ರತಿವಾದಿಗೆ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ **1/3** ಭಾಗದ ಹಿಸ್ಸೆ ಹಕ್ಕು ಇರುವುದಾಗಿ ಪ್ರತಿಪಾದಿಸುತ್ತಾರೆ.

**3)** ಮುಂದುವರೆದು ವಾದಿ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ರುದ್ರವ್ವ ಕೋಂ ಮಾಸ್ತೆಪ್ಪ ಇವರು ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟ ನಂತರ ತನ್ನ **2/3** ಭಾಗದ ಹಿಸ್ಸೆಯನ್ನು ವಿಂಗಡಿಸಿ ಪ್ರತ್ಯೇಕ ಸ್ವಾಧೀನವನ್ನು ಹಿಸ್ಸೆ ಮೂಲಕ ವಹಿಸಿಕೊಡುವಂತೆ ಪ್ರತಿವಾದಿಯನ್ನು **2019** ನೇ ಇಸವಿ ಜೂನ್ ತಿಂಗಳ ಮೊದಲನೇ ವಾರದಲ್ಲಿ ಕೇಳಿದ್ದು, ಅದಕ್ಕೆ ಪ್ರತಿವಾದಿ ಸದರಿ ಸ್ವತ್ತಿನಲ್ಲಿ ವಾದಿಗೆ ಇರುವ **2/3** ಭಾಗದ ಹಿಸ್ಸೆಯನ್ನು ವಿಂಗಡಿಸಿ, ಪ್ರತ್ಯೇಕ ಸ್ವಾಧೀನ ನೀಡದೇ ಕಾಲಹರಣ ಮಾಡುತ್ತಿರುವುದಾಗಿ ಆದ್ದರಿಂದ ವಾದಿ ಪ್ರತಿವಾದಿಯರ ವಿರುದ್ಧ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ತನಗಿರುವ **2/3** ಭಾಗದ ಸ್ವತ್ತಿನ ಪ್ರತ್ಯೇಕ ಸ್ವಾಧೀನ ಹೊಂದುವ ಬಗ್ಗೆ ಪರಿಹಾರ ಕೋರಿ ಈ ದಾವೆ ಸಲ್ಲಿಸಿರುತ್ತಾರೆ.

**4)** ದಾವಾ ನೋಂದಾಣಿ ಮಾಡಿಕೊಂಡು ಪ್ರತಿವಾದಿಗೆ ಸಮನ್ಸ್ ಹೊರಡಿಸಿದ್ದು, ಸಮನ್ಸ್ ಜಾರಿಯಾಗಿ ಪ್ರತಿವಾದಿಯರು ವಕೀಲರ ಮೂಲಕ ಹಾಜರಾಗಿರುತ್ತಾರೆ. ಆದರೆ, ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ .

**5)** ವಾದಿಯು, ಈ ಪ್ರಕರಣವನ್ನು ಸಾಭೀತು ಪಡಿಸಲು ಸ್ವತಃ ಪಿಡಬ್ಲೂ.**1** ಎಂದು ವಿಚಾರಣೆಗೆ ಒಳಪಟ್ಟಿದ್ದು, ತಮ್ಮ ಪರವಾಗಿ ನಿಪಿ.**1** ರಿಂದ **6** ರವರೆಗಿನ ದಾಖಲಾತಿಗಳನ್ನು ಗುರುತಿಸಿರುತ್ತಾರೆ. ಪ್ರತಿವಾದಿಗಳ ಪರವಾಗಿ ಯಾವುದೇ ಸಾಕ್ಷ್ಯ ಮತ್ತು ಯಾವುದೇ ಸಾಕ್ಷಿ ಇರುವುದಿಲ್ಲ.

6) ವಾದಿ ಪರ ವಕೀಲರ ವಾದವನ್ನು ಕೇಳಲಾಯಿತು. ಈ ಪ್ರಕರಣದ ವಾದ ಪತ್ರ ಮತ್ತು ಪ್ರಮಾಣ ಪತ್ರ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ನನ್ನ ಪರಿಗಣನೆಗೆ ಈ ಕೆಳಕಂಡ ಅಂಶ ಕಂಡುಬಂದಿರುತ್ತದೆ.

## ಅಂಶಗಳು

1. ವಾದಿಯು ಈ ದಾವೆಯ ದಾವಾ ಸ್ವತ್ತಿನಲ್ಲಿ 2/3 ನೇ ಭಾಗಾಂಶ ಪಡೆಯಲು ಅರ್ಹರೇ ?
2. ಯಾವ ಆದೇಶ ಅಥವಾ ಡಿಕ್ರಿ ?

7) ಮೇಲ್ಕಂಡ ಎರಡು ಅಂಶಗಳಿಗೆ ಕೆಳಕಂಡಂತೆ ಉತ್ತರಿಸುತ್ತೇನೆಃ

ಅಂಶ. 1 ಃ ಸಕಾರಾತ್ಮಕವಾಗಿ.
ಅಂಶ. 2 ಃ ನನ್ನ ಅಂತಿಮ ಆದೇಶದಂತೆ.

## ಕಾ ರ ಣ ಗ ಳು

8) **ಅಂಶ 1 ಃ-** ವಾದಿಯು ತಮ್ಮ ವಾದ ಪತ್ರದಲ್ಲಿ ತಿಳಿಸಿರುವ ಸಂಗತಿಗಳನ್ನು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪುನರ್ ಪ್ರತಿಪಾದಿಸಿರುತ್ತಾರೆ. ವಾದಿ ದಾವಾ ಸ್ವತ್ತು ತಮ್ಮ ಒಟ್ಟು ಕುಟುಂಬದ ಸ್ವತ್ತು ಎಂದು, ವಾದಿ ಮತ್ತು ಪ್ರತಿವಾದಿ ಹಾಗೂ ರುದ್ರಮ್ಮ ರವರ ಮೂಲ ಪುರುಷ ಈರಪ್ಪ ರವರ ಮಕ್ಕಳು ಎಂದು ಪ್ರತಿಪಾದಿಸುತ್ತಾರೆ. ವಾದಿ ಮತ್ತು ಪ್ರತಿವಾದಿ ಹಾಗೂ ಅವರ ಸಹೋದರಿ ರುದ್ರಮ್ಮ ರವರು ಈರಪ್ಪ ರವರ ಮಕ್ಕಳು ಎಂಬ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ವಾದಿಯು ದಾವಾ ಸ್ವತ್ತು ತಮ್ಮ ತಂದೆ ಈರಪ್ಪ ರವರ ಸ್ವಯಾರ್ಜಿತ ಸ್ವತ್ತುಗಳೆಂದು ಪ್ರತಿಪಾದಿಸುತ್ತಾರೆ. ನಿಪಿ.3 ರೆಕಾರ್ಡ್ ಆಫ್ ರೈಟ್ಸ್ ದಾಖಲಾತಿಯನ್ನು ಪರಿಶೀಲಿಸಿದಾಗ ವಾದಿಯ ತಂದೆ ದಾವಾ ಸ್ವತ್ತನ್ನು ಕ್ರಯ ಪತ್ರದ ಮುಖಾಂತರ ಖರೀದಿಸಿರುವುದಾಗಿ ಉಲ್ಲೇಖ ಇರುತ್ತದೆ. ಆದ್ದರಿಂದ ದಾವಾ ಸ್ವತ್ತು ವಾದಿಯ ತಂದೆ ಈರಪ್ಪ ರವರ ಸ್ವಯಾರ್ಜಿತ ಸ್ವತ್ತು ಎಂಬುದು ದೃಢೀಕರಿಸಲ್ಪಟ್ಟಿದೆ. ಈಗ ವಾದಿಯ ತಂದೆ ಮತ್ತು ತಾಯಿ ಮೃತಪಟ್ಟಿರುವುದು ಒಪ್ಪಿತ ಸಂಗತಿಯಾಗಿದ್ದು, ಆ ಕಾರಣ ದಾವಾ ಸ್ವತ್ತುಗಳಲ್ಲಿ ವಾದಿ ಮತ್ತು ಅವರು ಸಹೋದರ ಮತ್ತು ಸಹೋದರಿಯರಿಗೆ ವಾರಾಸದ ಆಧಾರದ ಮೇಲೆ ಸಮಾನ ಹಕ್ಕು ಇರುತ್ತದೆ.

9) ವಾದಿಯು ತನ್ನ ಸಹೋದರಿ ರುದ್ರಮ್ಮ ರವರು ದಿನಾಂಕಃ **21.03.2017** ರಂದು ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟು ದಾವಾ ಸ್ವತ್ತಿನಲ್ಲಿ ತಮ್ಮ ಪಾಲಿನ ಹಕ್ಕನ್ನು ತನಗೆ ಬಿಟ್ಟುಕೊಟ್ಟಿರುವುದಾಗಿ ಪ್ರತಿಪಾದಿಸುತ್ತಾರೆ. ವಾದಿ ಹಾಜರುಪಡಿಸಿ ಗುರುತಿಸಿರುವ ನಿಪಿ.2 ಹಕ್ಕು ಖುಲಾಸೆ ಪತ್ರವನ್ನು ಪರಿಶೀಲಿಸಿದಾಗ , ವಾದಿಯ ಸಹೋದರಿ ರುದ್ರಮ್ಮ ರವರು ದಾವಾ ಸ್ವತ್ತಿನಲ್ಲಿರುವ ತಮ್ಮ 1/3 ನೇ ಭಾಗಾಂಶದ ಹಕ್ಕನ್ನು ವಾದಿಯ ಪರವಾಗಿ ಬಿಟ್ಟುಕೊಟ್ಟಿರುವುದು ಕಂಡುಬರುತ್ತದೆ. ಸದರಿ ಹಕ್ಕು ಖುಲಾಸೆ ಪತ್ರ ನೋಂದಾಯಿತ ದಾಖಲಾತಿಯಾಗಿರುತ್ತದೆ. ಸದರಿ ಹಕ್ಕು ಖುಲಾಸೆ ಪತ್ರದ ನೈಜತೆಯನ್ನು ಯಾರು ಪ್ರಶ್ನಿಸಿರುವುದಿಲ್ಲ ಆ ಕಾರಣ ಸದರಿ ಹಕ್ಕು ಖುಲಾಸೆ ಪತ್ರ ಕಾನೂನುಬದ್ಧವಾಗಿರುತ್ತದೆ ಎಂದು ನ್ಯಾಯಾಲಯ ಪರಿಗಣಿಸಿದೆ.

**10)** ವಾದಿಯ ತಂದೆ ಮತ್ತು ತಾಯಿ ಮೃತಪಟ್ಟಿರುವುದರಿಂದ ದಾವಾ ಸ್ವತ್ತಿನಲ್ಲಿ ವಾದಿ ಮತ್ತು ಪ್ರತಿವಾದಿ ಹಾಗೂ ಅವರ ಸಹೋದರಿ ರುದ್ರಮ್ಮ ರವರಿಗೆ ತಲಾ **1/3** ನೇ ಭಾಗಾಂಶದ ಹಕ್ಕು ಇರುತ್ತದೆ. ವಾದಿಯ ಸಹೋದರಿ ತನ್ನ ಭಾಗಕ್ಕೆ ಬರುವ **1/3** ನೇ ಭಾಗಾಂಶವನ್ನು ವಾದಿಯ ಪರವಾಗಿ ನಿಪಿ.**2** ಹಕ್ಕು ಖುಲಾಸೆ ಪತ್ರದ ಮುಖಾಂತರ ಬಿಟ್ಟುಕೊಟ್ಟಿರುವುದರಿಂದ ಸದರಿ ಭಾಗಾಂಶ ವಾದಿಗೆ ಬಂದಿರುತ್ತದೆ. ಅದರಂತೆ ದಾವಾ ಸ್ವತ್ತಿನಲ್ಲಿ ವಾದಿಯು **2/3** ನೇ ಭಾಗಾಂಶವನ್ನು ಮತ್ತು ಪ್ರತಿವಾದಿ **1/3** ನೇ ಭಾಗಾಂಶವನ್ನು ಪಡೆಯಲು ಅರ್ಹರು ಎಂದು ನಿರ್ಣಯಿಸಿದೆ. ಅದರಂತೆ ಅಂಶ. **1** ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**11)** <u>ಅಂಶ 2 ಃ-</u> ಮೇಲ್ಕಂಡ ಚರ್ಚೆಯಿಂದ ಅಂಶ. **2** ಕ್ಕೆ ಈ ಕೆಳಕಂಡಂತೆ ಉತ್ತರಿಸುತ್ತೇನೆ ಃ

## <u>ಆದೇಶ</u>

ವಾದಿಯ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿದೆ .

ವಾದಿಯು ದಾವಾ ಸ್ವತ್ತುವಿನಲ್ಲಿ **2/3** ನೇ ಭಾಗಾಂಶವನ್ನು ಮತ್ತು ಪ್ರತಿವಾದಿ **1/3** ನೇ ಭಾಗಾಂಶವನ್ನು ಪಡೆಯಲು ಹಕ್ಕುವುಳ್ಳವರೆಂದು ಈ ಮೂಲಕ ಘೋಷಿಸಿದೆ.

**ಮೇಲ್ಕಂಡಂತೆ ಪ್ರಾಥಮಿಕ ಡಿಕ್ರಿ ಬರೆಯಿರಿ .**

**(**ಉಕ್ತಲೇಖನವನ್ನು ಶೀಘ್ರಲಿಪಿಗಾರರಿಗೆ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದಿ, ಸಹಿ, ಮಾಡಿ ನಂತರ ಇಂದು ದಿನಾಂಕ **08 ನೇ ಏಪ್ರೀಲ್ - 2021** ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

ಸಹಿ/-
**(ಬಿ.ಕೇಶವಮೂರ್ತಿ)**
ಸಿವಿಲ್ ನ್ಯಾಯಾಧೀಶರು ಮತ್ತು **ಜೆ.ಎಂ.ಎಫ್.ಸಿ.,**
**ಸೊರಬ.**

**ಅನುಬಂಧ**

1. **ವಾದಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ವಿವರಃ**

ಪಿಡಬ್ಲ್ಯೂ.**1** ಃ **ಲಕ್ಷ್ಮಣಪ್ಪ ಬಿನ್ ಈರಪ್ಪ.**

2. **ವಾದಿ ಪರ ಗುರ್ತಿಸಲಾದ ದಾಖಲೆಗಳ ವಿವರಃ**

ನಿಪಿ. **1** ಃ **ಪಹಣಿ ಪತ್ರಿಕೆ.**
ನಿಪಿ. **2** ಃ **ಹಕ್ಕು ಖುಲಾಸೆ ಪತ್ರ.**
ನಿಪಿ. **3** ಃ **ರೆಕಾರ್ಡ್ ಆಫ್ ರೈಟ್ಸ್.**
ನಿಪಿ. **4** ಃ **ಮ್ಯುಟೇಷನ್ ರಿಜಿಸ್ಟರ್.**
ನಿಪಿ. **5** ಃ **ದಿನಾಂಕಃ 22.07.1959** ರ ಕ್ರಯಪತ್ರ **.**
ನಿಪಿ. **6** ಃ **ಪಹಣಿ ಪತ್ರಿಕೆ.**

3. **ಪ್ರತಿವಾದಿಗಳ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ವಿವರಃ**

-- ಯಾರೂ ಇಲ್ಲಾ --

4. **ಪ್ರತಿವಾದಿಗಳ ಪರ ವಿಚಾರಣೆ ಗುರ್ತಿಸಲಾದ ದಾಖಲೆಗಳ ವಿವರಃ**

-- ಏನು ಇಲ್ಲಾ --

ಸಹಿ/-
**(ಬಿ.ಕೇಶವಮೂರ್ತಿ)**
ಸಿವಿಲ್ ನ್ಯಾಯಾಧೀಶರು ಮತ್ತು **ಜೆ.ಎಂ.ಎಫ್.ಸಿ.,**
**ಸೊರಬ.**